**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 79/2024 |
| ಸಿ.ಡಬ್ಲೂ | - 11 |
| ಪಿ.ಡಬ್ಲೂ | - 04 |
| ಸಾಕ್ಷಿಯ ಹೆಸರು | - ಪರಸಪ್ಪ ಬಸಪ್ಪ ನಾಯ್ಕಾರ |
| ವಯಸ್ಸು | - 39 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸ ಸ್ಥಳ | - ತುಪ್ಪದಕುರಹಟ್ಟಿ |

ದಿನಾಂಕಃ 19/07/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

1. ಪ್ರಕರಣದ ಆರೋಪಿ ನನ್ನ ಸಂಬಂಧಿಕ. ಚಾಸಾ-1 ರವರ ಪರಿಚಯವಿದೆ. ಚಾಸಾ-9 ರವರ ಪರಿಚಯವಿಲ್ಲ. ಚಾಸಾ-10, 12 ಮತ್ತು 13 ರವರ ಪರಿಚಯವಿದೆ. ಮೃತ ಬಸಪ್ಪ ವೀರಪ್ಪ ಕುಂಬಾರ ರವರ ಪರಿಚಯವಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ನನಗೆ ಏನು ಮಾಹಿತಿ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿನಾಂಕಃ 03-09-2023 ರಂದು ಸಂ.06.00 ಗಂಟೆಗೆ ಆರೋಪಿ ಚಾಲನಾ ಪರವಾನಗೆ ಹೊಂದದೇ ಮೋಟಾರ ಸೈಕಲ್ ಸಂಃ KA-26/L-0274 ನೇದ್ದನ್ನು ವಿಮೆ

ಮಾಡಿಸದೇ ತನ್ನ ಮೋಟಾರ ಸೈಕಲ್ ನ ಹಿಂದೆ ಬಸಪ್ಪ ವೀರಪ್ಪ ಕುಂಬಾರ ರವರನ್ನು ಕೂರಿಸಿಕೊಂಡು ಹುಬ್ಬಳ್ಳಿಯಿಂದ ಗದಗ ಕಡೆಗೆ ಅತೀ ವೇಗ ಹಾಗೂ ಅಲಕ್ಷ್ಯತನದಿಂದ ಚಲಾಯಿಸಿ ವಾಹನವನ್ನು ನಿಯಂತ್ರಿಸಲಾಗದೇ ತನ್ನ ಮುಂದೆ ಹೋಗುತ್ತಿದ್ದ ಲಾರಿ ಸಂಃ KA-52/A-1299 ನೇದ್ದರ ಹಿಂದಿನ ಗಾಲಿಯ ಹತ್ತಿರ ಮೋಟಾರ ಸೈಕಲ್ ನ್ನು ಕೆಡವಿದ್ದರಿಂದ ಹಿಂಬದಿಯ ಸವಾರನ ತಲೆಯ ಮೇಲೆ ಲಾರಿ ಹಾಯ್ದು ಸ್ಥಳದಲ್ಲೇ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-5** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**